(ಕರ್ನಾಟಕ ಸರ್ಕಾರ)

# ಪ್ರಾಯೋಗಿಕ ಮಾರ್ಪಡಿಸಿದ
# ರಾಷ್ಟ್ರೀಯ ಕೃಷಿ ವಿಮಾ ಯೋಜನೆ

## ಹಿಂಗಾರು ಮತ್ತು ಬೇಸಿಗೆ 2013–14ರ
## ಸರ್ಕಾರಿ ಆದೇಶ

**ಸರ್ಕಾರದ ಆದೇಶ ಸಂಖ್ಯೆ.**

**ಕೃಇ/144/ಕೃಉಇ/2013, ಬೆಂಗಳೂರು; ದಿನಾಂಕ:26–10–2013.**

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಪ್ರಾಯೋಗಿಕ ಮಾರ್ಪಡಿಸಿದ ರಾಷ್ಟ್ರೀಯ ಕೃಷಿ ವಿಮಾ ಯೋಜನೆಯನ್ನು 2013-14ರ ಹಿಂಗಾರು ಹಾಗೂ ಬೇಸಿಗೆ ಹಂಗಾಮುಗಳಲ್ಲಿ ಅನುಷ್ಠಾನಗೊಳಿಸಲು ಘಟಕವಾರು ಬೆಳೆಗಳ ಘೋಷಣೆ ಬಗ್ಗೆ -ಆದೇಶಗಳು.

**ಸರ್ಕಾರದ ಆದೇಶ ಸಂಖ್ಯೆ:ಕೃಇ/144/ಕೃಉಇ/2013, ಬೆಂಗಳೂರು; ದಿನಾಂಕ:26-10-2013.**

**ಓದಲಾಗಿದೆ:** 1) ಸರ್ಕಾರದ ಆದೇಶದ ಸಂಖ್ಯೆ:ಕೃತೋಇ/155/ಕೃಉಇ/98(ಪಿ)/2000; ದಿನಾಂಕ:11-5-2000.

2) ಕೇಂದ್ರ ಸರ್ಕಾರದ ಪತ್ರ ಸಂ.:13011/02/2008-ಕ್ರೆಡಿಟ್-II(Pt.); ದಿನಾಂಕ:7-2-2013.

3) ರಾಜ್ಯಮಟ್ಟದ ಬೆಳೆ ವಿಮಾ ಸಮನ್ವಯ ಸಮಿತಿ ಸಭೆಯ ದಿನಾಂಕ:1-10-2013ರ ನಡವಳಿಗಳು.

4) ಕೃಷಿ ನಿರ್ದೇಶಕರ ಪತ್ರದ ಸಂಖ್ಯೆ:ಬೆವಿಘ/ತಾಂ-1/13/2013-14; ದಿನಾಂಕ:09-10-2013.

---

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮಾಂಕ (1)ರಲ್ಲಿನ ಸರ್ಕಾರಿ ಆದೇಶದನ್ವಯ 2000ನೇ ಸಾಲಿನ ಮುಂಗಾರು ಹಂಗಾಮಿನಿಂದ ರಾಷ್ಟ್ರೀಯ ಕೃಷಿ ವಿಮಾ ಯೋಜನೆಯನ್ನು ಕರ್ನಾಟಕ ರಾಜ್ಯದಲ್ಲಿ ಘೋಷಿಸಿದ ಬೆಳೆಗಳು ಮತ್ತು ತಾಲ್ಲೂಕುಗಳಿಗೆ ಅನುಷ್ಠಾನಗೊಳಿಸಲು ಅಧಿಸೂಚನೆ ಹೊರಡಿಸಲಾಗಿದೆ.

ಮೇಲೆ ಓದಲಾದ (2)ರ ಪತ್ರದಲ್ಲಿ ಕೇಂದ್ರ ಸರ್ಕಾರವು ರಾಷ್ಟ್ರೀಯ ಕೃಷಿ ವಿಮಾ ಯೋಜನೆಯಲ್ಲಿ ಕೆಲವು ಮಾರ್ಪಾಡುಗಳನ್ನು ತಂದು 2013-14ನೇ ಸಾಲಿನ ಮುಂಗಾರು, ಹಿಂಗಾರು ಮತ್ತು ಬೇಸಿಗೆ ಹಂಗಾಮಿಗೆ ಪ್ರಾಯೋಗಿಕ ಮಾರ್ಪಡಿಸಿದ ರಾಷ್ಟ್ರೀಯ ಕೃಷಿ ವಿಮಾ ಯೋಜನೆಯನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿರುತ್ತದೆ. ಕರ್ನಾಟಕ ರಾಜ್ಯವನ್ನು ಸಹ ಆಯ್ಕೆಮಾಡಿ ರಾಜ್ಯದಲ್ಲಿ ಗುಲಬರ್ಗಾ, ಶಿವಮೊಗ್ಗ, ತುಮಕೂರು ಮತ್ತು ಉತ್ತರಕನ್ನಡ ಜಿಲ್ಲೆಗಳನ್ನು ಆಯ್ದು ಯೋಜನೆಯನ್ನು ಅನುಷ್ಠಾನಗೊಳಿಸಲು ಮಂಜೂರಾತಿ ನೀಡಿರುತ್ತದೆ.

ಮೇಲೆ ಓದಲಾದ ಕ್ರಮಾಂಕ (3)ರಲ್ಲಿ ದಿನಾಂಕ:01-10-2013ರಂದು ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಜರುಗಿದ ರಾಜ್ಯಮಟ್ಟದ ಬೆಳೆ ವಿಮಾ ಸಮನ್ವಯ ಸಮಿತಿ ಸಭೆಯಲ್ಲಿ 2013-14ನೇ ಸಾಲಿನ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ಪ್ರಾಯೋಗಿಕ ಮಾರ್ಪಡಿಸಿದ ರಾಷ್ಟ್ರೀಯ ಕೃಷಿ ವಿಮಾ ಯೋಜನೆಯನ್ನು ಅನುಷ್ಠಾನಗೊಳಿಸಲು ಒಪ್ಪಿಗೆ ನೀಡಲಾಗಿದೆ. ಸದರಿ ಸಭೆಯಲ್ಲಿ 2013-14ರ ಹಿಂಗಾರು ಮತ್ತು ಬೇಸಿಗೆ ಹಂಗಾಮುಗಳಲ್ಲಿ ಆಯ್ಕೆಯಾದ 4 ಜಿಲ್ಲೆಗಳಲ್ಲಿ ಸ್ಥಳ ನಿರ್ದಿಷ್ಟ ಪ್ರಕೃತಿ ವಿಕೋಪಗಳ ಸಂದರ್ಭದಲ್ಲಿ ನಷ್ಟದ ನಿರ್ಧರಣೆಗಾಗಿ, ಬಿತ್ತನೆ ವಿಫಲಗೊಂಡಲ್ಲಿ ಬೆಳೆ ವಿಮಾ ನಷ್ಟ ಪರಿಹಾರ ನೀಡಲು, ಬಿತ್ತನೆಯಿಂದ ಕಟಾವು ಹಂತದವರೆಗಿನ ಮಧ್ಯದ ಅವಧಿಯಲ್ಲಿ ಬೆಳೆ ನಷ್ಟ ಸಂಭವಿಸಿದರೆ ಮುಂಚಿತವಾಗಿ ಅಂದಾಜು ಮಾಡಲಾದ ಬೆಳೆ ವಿಮಾ ನಷ್ಟ ಪರಿಹಾರದಲ್ಲಿ ಶೇಕಡಾ 25ರಷ್ಟು ಹಣವನ್ನು ಪರಿಹಾರವಾಗಿ ನೀಡಲು ತೀರ್ಮಾನಿಸಲಾಗಿದೆ.

ಸದರಿ ಸಭೆಯಲ್ಲಿ ಈ ಕೆಳಕಂಡ ತೀರ್ಮಾನಗಳನ್ನು ತೆಗೆದುಕೊಳ್ಳಲಾಗಿದೆ.

1. 6 ಬೆಳೆಗಳಾದ ಭತ್ತ (ನೀರಾವರಿ), ಮುಸುಕಿನ ಜೋಳ (ನೀರಾವರಿ), ಹುರುಳಿ (ಮಳೆ ಆಶ್ರಿತ), ಹೆಸರು (ಮಳೆ ಆಶ್ರಿತ), ಕುಸುಮೆ (ಮಳೆಆಶ್ರಿತ) ಮತ್ತು (ಶೇಂಗಾ) (ಮಳೆಆಶ್ರಿತ) ಇವುಗಳನ್ನು 2013-14ರ ಹಿಂಗಾರು ಹಂಗಾಮಿಗೆ ಹೋಬಳಿ ಮಟ್ಟಕ್ಕೆ ಮತ್ತು 8 ಬೆಳೆಗಳಾದ ಜೋಳ (ನೀರಾವರಿ), ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಗೋಧಿ (ಮಳೆ ಆಶ್ರಿತ), ಕಡಲೆ (ನೀರಾವರಿ), ಕಡಲೆ (ಮಳೆಆಶ್ರಿತ), ಸೂರ್ಯಕಾಂತಿ (ನೀರಾವರಿ), ಸೂರ್ಯಕಾಂತಿ (ಮಳೆ ಆಶ್ರಿತ) ಇವುಗಳನ್ನು 2013-14ರ ಹಿಂಗಾರು ಹಂಗಾಮಿಗೆ ಗ್ರಾಮ ಪಂಚಾಯತಿ ಮಟ್ಟಕ್ಕೆ ಅಳವಡಿಸಲು ತೀರ್ಮಾನಿಸಲಾಗಿದೆ. 2013-14ರ ಬೇಸಿಗೆ ಹಂಗಾಮಿನಲ್ಲಿ ಸೂರ್ಯಕಾಂತಿ (ನೀರಾವರಿ) ಬೆಳೆಯನ್ನು ಹೋಬಳಿ ಮಟ್ಟಕ್ಕೆ ಮತ್ತು ಭತ್ತ (ನೀರಾವರಿ), ನೆಲಗಡಲೆ (ಶೇಂಗಾ) (ನೀರಾವರಿ) ಹಾಗೂ ನೆಲಗಡಲೆ (ಶೇಂಗಾ) (ಮಳೆಆಶ್ರಿತ) ಬೆಳೆಗಳನ್ನು ಗ್ರಾಮ ಪಂಚಾಯತಿ ಮಟ್ಟಕ್ಕೆ ಅಳವಡಿಸಲು ತೀರ್ಮಾನಿಸಲಾಗಿದೆ.

2. ಅಗ್ರಿಕಲ್ಚರ್ ಇನ್ಸೂರೆನ್ಸ್ ಕಂಪನಿ ಆಫ್ ಇಂಡಿಯಾ ಲಿ., ಸಂಸ್ಥೆಗೆ ಗುಲಬರ್ಗಾ, ಶಿವಮೊಗ್ಗ, ತುಮಕೂರು ಮತ್ತು ಉತ್ತರಕನ್ನಡ ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಹಂಚಿಕೆ ಮಾಡಲು ಒಪ್ಪಿಗೆ ನೀಡಲಾಗಿದೆ.

3. ವಿಮಾ ಸಂಸ್ಥೆಯು ಒದಗಿಸಿದ ಇಂಡೆಮ್ನಿಟಿ ಮೊತ್ತ, ವಿಮಾ ಮೊತ್ತ ಮತ್ತು ವಾಣಿಜ್ಯ ವಿಮಾ ಕಂತಿನ ದರಗಳಿಗೆ ಒಪ್ಪಿಗೆ ನೀಡಲಾಗಿದೆ.

4. ಪ್ರಾರಂಭಿಕ ಇಳುವರಿ ಮತ್ತು ವಿಮಾ ಮೊತ್ತವನ್ನು ಲೆಕ್ಕಹಾಕಲು 2006–07, 2011–12 ಹಾಗೂ 2012–13 ವರ್ಷಗಳನ್ನು ವಿಪತ್ತೊದಗಿದ ವರ್ಷಗಳೆಂದು ಪರಿಗಣಿಸಲಾಗಿದೆ. 2006–07ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯ ಭದ್ರಾವತಿ ಮತ್ತು ಶಿಕಾರಿಪುರ ತಾಲ್ಲೂಕುಗಳು, 2011–12ನೇ ಸಾಲಿನಲ್ಲಿ ಗುಲಬರ್ಗಾ ಮತ್ತು ತುಮಕೂರು ಜಿಲ್ಲೆಯ ಎಲ್ಲಾ ತಾಲ್ಲೂಕುಗಳು ಹಾಗೂ 2012–13ನೇ ಸಾಲಿನಲ್ಲಿ ಗುಲಬರ್ಗಾ, ಶಿವಮೊಗ್ಗ ಮತ್ತು ತುಮಕೂರು ಜಿಲ್ಲೆಯ ಎಲ್ಲಾ ತಾಲ್ಲೂಕುಗಳು ಮತ್ತು ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡು, ಶಿರಸಿ ಮತ್ತು ಯಲ್ಲಾಪುರ ತಾಲ್ಲೂಕುಗಳನ್ನು ವಿಪತ್ತೊದಗಿದ ತಾಲ್ಲೂಕುಗಳೆಂದು ಪರಿಗಣಿಸಲಾಗಿದೆ.

5. ಈ ಯೋಜನೆಯಡಿ ವಿವಿಧ ಚಟುವಟಿಕೆಗಳಿಗೆ ಕೊನೆಯ ದಿನಾಂಕವನ್ನು ಗೊತ್ತುಪಡಿಸಲಾಗಿದೆ.

ಮೇಲೆ ಓದಲಾದ ಕ್ರಮಾಂಕ (4)ರಲ್ಲಿ ಕೃಷಿ ನಿರ್ದೇಶಕರು, ಬೆಂಗಳೂರು ಇವರು ರಾಜ್ಯಮಟ್ಟದ ಬೆಳೆ ವಿಮಾ ಸಮನ್ವಯ ಸಮಿತಿ ಸಭೆಯು ತೆಗೆದುಕೊಂಡ ತೀರ್ಮಾನದಂತೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿ ಸೂಕ್ತ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ.

ಮೇಲಿನ ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಆದೇಶವನ್ನು ನೀಡಲಾಗಿದೆ.

## ಆದೇಶ

1. ಕರ್ನಾಟಕ ರಾಜ್ಯದಲ್ಲಿ 2013–14ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ಮಾರ್ಪಡಿಸಿದ ರಾಷ್ಟ್ರೀಯ ಕೃಷಿ ವಿಮಾ ಯೋಜನೆಯನ್ನು ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲು ಮಂಜೂರಾತಿ ನೀಡಲಾಗಿದೆ.

2. 6 ಬೆಳೆಗಳಾದ ಭತ್ತ (ನೀರಾವರಿ), ಮುಸುಕಿನ ಜೋಳ (ನೀರಾವರಿ), ಹುರುಳಿ (ಮಳೆ ಆಶ್ರಿತ), ಹೆಸರು (ಮಳೆ ಆಶ್ರಿತ), ಕುಸುಮೆ (ಮಳೆಆಶ್ರಿತ) ಮತ್ತು ನೆಲಗಡಲೆ (ಶೇಂಗಾ) (ಮಳೆಆಶ್ರಿತ) ಇವುಗಳನ್ನು 2013–14ರ ಹಿಂಗಾರು ಹಂಗಾಮಿಗೆ ಹೋಬಳಿ ಮಟ್ಟಕ್ಕೆ ಮತ್ತು 8 ಬೆಳೆಗಳಾದ ಜೋಳ (ನೀರಾವರಿ), ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಗೋಧಿ (ಮಳೆಆಶ್ರಿತ), ಕಡಲೆ (ನೀರಾವರಿ), ಕಡಲೆ (ಮಳೆಆಶ್ರಿತ), ಸೂರ್ಯಕಾಂತಿ (ನೀರಾವರಿ) ಮತ್ತು ಸೂರ್ಯಕಾಂತಿ (ಮಳೆ ಆಶ್ರಿತ) ಇವುಗಳನ್ನು 2013–14ರ ಹಿಂಗಾರು ಹಂಗಾಮಿಗೆ ಗ್ರಾಮ ಪಂಚಾಯತಿ ಮಟ್ಟಕ್ಕೆ ಅಳವಡಿಸಿ ಅನುಷ್ಠಾನಗೊಳಿಸಲು ಹಾಗೂ 2013–14ರ ಬೇಸಿಗೆ ಹಂಗಾಮಿನಲ್ಲಿ ಸೂರ್ಯಕಾಂತಿ (ನೀರಾವರಿ) ಬೆಳೆಯನ್ನು ಹೋಬಳಿ ಮಟ್ಟಕ್ಕೆ ಮತ್ತು ಭತ್ತ (ನೀರಾವರಿ), ನೆಲಗಡಲೆ (ಶೇಂಗಾ) (ನೀರಾವರಿ) ಹಾಗೂ ನೆಲಗಡಲೆ (ಶೇಂಗಾ) (ಮಳೆಆಶ್ರಿತ) ಬೆಳೆಗಳನ್ನು ಗ್ರಾಮ ಪಂಚಾಯತಿ ಮಟ್ಟಕ್ಕೆ ಅಳವಡಿಸಿ 4 ಜಿಲ್ಲೆಗಳಾದ ಗುಲಬರ್ಗಾ, ಶಿವಮೊಗ್ಗ, ತುಮಕೂರು ಮತ್ತು ಉತ್ತರಕನ್ನಡ ಇವು ಗಳಲ್ಲಿ ಅಗ್ರಿಕಲ್ಚರ್ ಇನ್ಸೂರೆನ್ಸ್ ಕಂಪನಿ ಆಫ್ ಇಂಡಿಯಾ ಲಿ., ಸಂಸ್ಥೆಗೆ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಹಂಚಿಕೆ ಮಾಡಿ ಮಂಜೂರಾತಿ ನೀಡಲಾಗಿದೆ.

3. 2013–14ರ ಹಿಂಗಾರು ಮತ್ತು ಬೇಸಿಗೆ ಹಂಗಾಮುಗಳಲ್ಲಿ ಮಾರ್ಪಡಿಸಿದ ರಾಷ್ಟ್ರೀಯ ಕೃಷಿ ವಿಮಾ ಯೋಜನೆಯನ್ನು ಪ್ರಾಯೋಗಿಕವಾಗಿ ಅನುಷ್ಠಾನಕ್ಕಾಗಿ ಆಯ್ದ ಬೆಳೆಗಳು ಮತ್ತು ಘಟಕಗಳ ಸಂಖ್ಯೆಯನ್ನು ಕೆಳಗೆ ಕೊಡಲಾಗಿದೆ.

| ಕ್ರ. ಸಂ. | ಬೆಳೆಗಳು | ಘಟಕಗಳ ಸಂಖ್ಯೆ |
|---|---|---|
| **2013–14ರ ಹಿಂಗಾರು** | | |
| **ಹೋಬಳಿ ಮಟ್ಟಕ್ಕೆ** | | |
| 1 | ಭತ್ತ (ನೀರಾವರಿ) | 9 |
| 2 | ಮುಸುಕಿನಜೋಳ (ನೀರಾವರಿ) | 7 |
| 3 | ಹುರುಳಿ (ಮಳೆ ಆಶ್ರಿತ) | 21 |
| 4 | ಹೆಸರು (ಮಳೆ ಆಶ್ರಿತ) | 2 |
| 5 | ಕುಸುಮೆ (ಮಳೆ ಆಶ್ರಿತ) | 32 |
| 6 | ನೆಲಗಡಲೆ(ಶೇಂಗಾ) (ಮಳೆಆಶ್ರಿತ) | 4 |
| **ಗ್ರಾಮ ಪಂಚಾಯತಿ ಮಟ್ಟಕ್ಕೆ** | | |
| 1 | ಜೋಳ (ನೀರಾವರಿ) | 38 |
| 2 | ಜೋಳ (ಮಳೆ ಆಶ್ರಿತ) | 237 |
| 3 | ಗೋಧಿ (ನೀರಾವರಿ) | 61 |
| 4 | ಗೋಧಿ (ಮಳೆ ಆಶ್ರಿತ) | 42 |
| 5 | ಕಡಲೆ (ನೀರಾವರಿ) | 27 |
| 6 | ಕಡಲೆ (ಮಳೆ ಆಶ್ರಿತ) | 223 |
| 7 | ಸೂರ್ಯಕಾಂತಿ (ನೀರಾವರಿ) | 6 |
| 8 | ಸೂರ್ಯಕಾಂತಿ (ಮಳೆ ಆಶ್ರಿತ) | 109 |
| **2013–14ರ ಬೇಸಿಗೆ** | | |
| **ಹೋಬಳಿ ಮಟ್ಟಕ್ಕೆ** | | |
| 1 | ಸೂರ್ಯಕಾಂತಿ (ನೀರಾವರಿ) | 9 |
| **ಗ್ರಾಮ ಪಂಚಾಯತಿ ಮಟ್ಟಕ್ಕೆ** | | |
| 1 | ಭತ್ತ (ನೀರಾವರಿ) | 116 |
| 2 | ನೆಲಗಡಲೆ (ಶೇಂಗಾ) (ನೀರಾವರಿ) | 24 |
| 3 | ನೆಲಗಡಲೆ (ಶೇಂಗಾ) (ಮಳೆಆಶ್ರಿತ) | 2 |

4. ಮೇಲೆ ನಮೂದಿಸಿದ ಹೋಬಳಿವಾರು ಬೆಳೆಗಳ ಪಟ್ಟಿಯನ್ನು ಅನುಬಂಧ – 1ರಲ್ಲಿ ನೀಡಲಾಗಿದೆ.

5. ಮೇಲೆ ನಮೂದಿಸಿದ ಗ್ರಾಮ ಪಂಚಾಯತಿವಾರು ಬೆಳೆಗಳ ಪಟ್ಟಿಯನ್ನು ಅನುಬಂಧ – 2ರಲ್ಲಿ ನೀಡಲಾಗಿದೆ.

6. ಪ್ರಾರಂಭಿಕ ಇಳುವರಿ ಮತ್ತು ವಿಮಾ ಮೊತ್ತವನ್ನು ಲೆಕ್ಕಹಾಕಲು 2006–07, 2011–12 ಹಾಗೂ 2012–13 ವರ್ಷಗಳನ್ನು ವಿಪತ್ತೊದಗಿದ ವರ್ಷಗಳೆಂದು ಪರಿಗಣಿಸಲಾಗಿದೆ. 2006–07ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯ ಭದ್ರಾವತಿ ಮತ್ತು ಶಿಕಾರಿಪುರ ತಾಲ್ಲೂಕುಗಳು, 2011–12ನೇ ಸಾಲಿನಲ್ಲಿ ಗುಲಬರ್ಗಾ ಮತ್ತು ತುಮಕೂರು ಜಿಲ್ಲೆಯ ಎಲ್ಲಾ ತಾಲ್ಲೂಕುಗಳು ಹಾಗೂ 2012–13ನೇ ಸಾಲಿನಲ್ಲಿ ಗುಲಬರ್ಗಾ, ಶಿವಮೊಗ್ಗ ಮತ್ತು ತುಮಕೂರು ಜಿಲ್ಲೆಯ ಎಲ್ಲಾ ತಾಲ್ಲೂಕುಗಳು ಮತ್ತು ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡು, ಶಿರಸಿ ಮತ್ತು ಯಲ್ಲಾಪುರ ತಾಲ್ಲೂಕುಗಳನ್ನು ವಿಪತ್ತೊದಗಿದ ತಾಲ್ಲೂಕುಗಳೆಂದು ಪರಿಗಣಿಸತಕ್ಕದ್ದು.

7. 2013–14ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನ ಬೆಳೆಗಳಿಗೆ ನಿಗದಿಪಡಿಸಲಾಗಿರುವ ಇಂಡೆಮ್ನಿಟಿ ಮಟ್ಟ, ವಿಮಾ ಮೊತ್ತ ಮತ್ತು ವಿಮಾ ಕಂತಿನ ವಿವರಗಳನ್ನು ಅನುಬಂಧ – 3ರಲ್ಲಿ ನೀಡಲಾಗಿದೆ.

8. ವಾಣಿಜ್ಯ ವಿಮಾ ಕಂತಿನ ದರ ಹಾಗೂ ರೈತರು ಕಟ್ಟಬೇಕಾಗಿರುವ ವಿಮಾ ಕಂತಿನ ದರದಲ್ಲಿನ ವ್ಯತ್ಯಾಸದ ಮೊಬಲಗಿನಲ್ಲಿ ಶೇಕಡಾ 50ರಷ್ಟು ಹಣವನ್ನು ರಾಜ್ಯ ಸರ್ಕಾರವು ಭರಿಸಲು ಹಾಗೂ ಈ ಹಣವನ್ನು ಅಗ್ರಿಕಲ್ಚರ್ ಇನ್ಸೂರೆನ್ಸ್ ಕಂಪನಿ ಆಫ್ ಇಂಡಿಯಾ ಲಿ., ಸಂಸ್ಥೆಗೆ ಪಾವತಿಸಲು ಮಂಜೂರಾತಿ ನೀಡಲಾಗಿದೆ.

9. 2013–14ರ ಹಿಂಗಾರು ಹಂಗಾಮಿಗೆ ಬೆಳೆ ಸಾಲ ಪಡೆದ ರೈತರಿಗೆ ದಿನಾಂಕ:01–10–2013 ರಿಂದ ದಿನಾಂಕ:31-12–2013ರೊಳಗೆ ಮತ್ತು ಬೇಸಿಗೆ ಹಂಗಾಮಿಗೆ ದಿನಾಂಕ:01-01–2014 ರಿಂದ ದಿನಾಂಕ:28–02–2014ರೊಳಗೆ ಬೆಳೆ ಸಾಲ ಮಂಜೂರಾಗಿದ್ದರೆ ಅಂತಹ ರೈತರನ್ನು ಕಡ್ಡಾಯವಾಗಿ ಯೋಜನೆಯಡಿಯಲ್ಲಿ ಒಳಪಡಿಸತಕ್ಕದ್ದು.

10. 2013–14ರ ಹಿಂಗಾರು ಹಂಗಾಮಿಗೆ ಇಚ್ಛೆಯುಳ್ಳ ಬೆಳೆ ಸಾಲ ಪಡೆಯದ ರೈತರು ಯೋಜನೆಯಡಿ ಭಾಗವಹಿಸಲು ಕೊನೆಯ ದಿನಾಂಕ:31–12–2013 ಹಾಗೂ ಬೇಸಿಗೆ ಹಂಗಾಮಿಗೆ ದಿನಾಂಕ:28–02–2014 ಆಗಿರುತ್ತದೆ. ಬೆಳೆ ಸಾಲ ಪಡೆಯದ ರೈತರು ಅರ್ಜಿಯೊಂದಿಗೆ ಭೂಮಿ ಹೊಂದಿರುವುದಕ್ಕೆ ದಾಖಲೆಗಳಾದ ಪಹಣಿ / ಖಾತೆ / ಪಾಸ್ ಪುಸ್ತಕ / ಕಂದಾಯ ರಶೀದಿಯನ್ನು ನೀಡತಕ್ಕದ್ದು.

11. ಈಗ ರಾಷ್ಟ್ರೀಯ ಕೃಷಿ ವಿಮಾ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಆರ್ಥಿಕ ಸಂಸ್ಥೆಗಳ ಜೊತೆಗೆ ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಕಂಪನಿ ಲಿ., ಸಹ ಈ ಯೋಜನೆಯಲ್ಲಿ ಕಾರ್ಯನಿರ್ವಹಿಸುವುದು. ಪ್ರಸಕ್ತ ಮಾಹೆಯಲ್ಲಿ ವಿಮೆ ಮಾಡಿಸಿದ ರೈತರ ಪ್ರಸ್ತಾವನೆಗಳನ್ನು ಮುಂದಿನ ಮಾಹೆಯ ಅಂತ್ಯದೊಳಗೆ ನೋಡಲ್ ಬ್ಯಾಂಕುಗಳು ವಿಮಾ ಸಂಸ್ಥೆಗೆ ಸಲ್ಲಿಸತಕ್ಕದ್ದು. ಅಂತಿಮವಾಗಿ ಪ್ರಸ್ತಾವನೆಗಳನ್ನು ವಿಮಾ ಸಂಸ್ಥೆಗಳಿಗೆ ನೀಡಲು ಹಿಂಗಾರು ಹಂಗಾಮಿಗೆ ಕೊನೆಯ ದಿನಾಂಕ: 31–01–2014 ಮತ್ತು ಬೇಸಿಗೆ ಹಂಗಾಮಿಗೆ ದಿನಾಂಕ:31–03–2014 ಆಗಿರುತ್ತದೆ.

12. ವಿಮಾ ಸಂಸ್ಥೆಯು ಬೆಳೆ ಸಾಲ ಪಡೆಯದ ರೈತರನ್ನು ಅಧಿಕೃತ ಏಜೆಂಟರ ಮೂಲಕವೂ ಸಹ ಯೋಜನೆಯಡಿ ಒಳಪಡಿಸಲು ಅನುಮತಿ ನೀಡಲಾಗಿದೆ.

13. 2012–13ರ ಹಿಂಗಾರು ಮತ್ತು ಬೇಸಿಗೆ ಹಂಗಾಮುಗಳಲ್ಲಿ ಅಧಿಸೂಚಿತ ಘಟಕದಲ್ಲಿ ಶೇಕಡಾ 75ಕ್ಕಿಂತ ಹೆಚ್ಚಿನ ಕ್ಷೇತ್ರದಲ್ಲಿ ಬಿತ್ತನೆ ವಿಫಲಗೊಂಡಲ್ಲಿ ಈ ಕೆಳಕಂಡಂತೆ ಬೆಳೆ ವಿಮಾ ನಷ್ಟ ಪರಿಹಾರವನ್ನು ವಿಮಾ ಸಂಸ್ಥೆಯು ವಿಮೆ ಮಾಡಿಸಿದ ರೈತರಿಗೆ ಇತ್ಯರ್ಥಪಡಿಸಿ ಮುಂದಿನ ಅವಧಿಗೆ ವಿಮೆಯನ್ನು ರದ್ದುಪಡಿಸತಕ್ಕದ್ದು.

| | | |
|---|---|---|
| ಅ | ಬಿತ್ತನೆ ಪೂರ್ಣವಾಗಿ ವಿಫಲಗೊಂಡಲ್ಲಿ | ವಿಮಾ ಮೊತ್ತಕ್ಕೆ ಶೇಕಡಾ 12.50ರಷ್ಟು ಪರಿಹಾರ |
| ಆ | ಬಿತ್ತನೆಯಾದ ನಂತರ ಮೊಳಕೆ ಬಾರದಿದ್ದಲ್ಲಿ | ವಿಮಾ ಮೊತ್ತಕ್ಕೆ ಶೇಕಡಾ 18.75ರಷ್ಟು ಪರಿಹಾರ |
| ಇ | ಮೊಳಕೆ ಬಂದನಂತರ ಮುಂಚಿತವಾಗಿ ಬೆಳೆ ಬಾಡಿಹೋದರೆ ಅಥವಾ ಹಾಳಾದರೆ | ವಿಮಾ ಮೊತ್ತಕ್ಕೆ ಶೇಕಡಾ 25.00ರಷ್ಟು ಪರಿಹಾರ |

14. ಬಿತ್ತನೆ ಕ್ಷೇತ್ರದ ವರದಿಯನ್ನು ನೀಡಲು ಜಿಲ್ಲಾ ಜಿಲ್ಲಾಧಿಕಾರಿಯವರನ್ನು ಹಾಗೂ ಮಳೆ ಮತ್ತು ಇತರೆ ಕೃಷಿ ಹವಾಮಾನದ ವರದಿಯನ್ನು ನೀಡಲು ನಿರ್ದೇಶಕರು, ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ, ಬೆಂಗಳೂರು ಇವರನ್ನು ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ.

15. ನೋಡಲ್ ಅಧಿಕಾರಿಗಳಿಂದ ವರದಿ ಬಂದನಂತರ ಒಂದು ತಿಂಗಳೊಳಗೆ ವಿಮಾ ಸಂಸ್ಥೆಯು ವಿಮೆ ಮಾಡಿಸಿದ ರೈತರಿಗೆ ಮೇಲಿನಂತೆ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸತಕ್ಕದ್ದು.

16. 2013–14ರ ಹಿಂಗಾರು ಮತ್ತು ಬೇಸಿಗೆ ಹಂಗಾಮುಗಳಲ್ಲಿ ಅಧಿಸೂಚಿತ ಘಟಕದಲ್ಲಿ ಬಿತ್ತನೆಯಾದ ನಂತರ ಕಟಾವಿಗೆ ಮೊದಲು ಶೇಕಡಾ 50ಕ್ಕಿಂತ ಹೆಚ್ಚಿನ ಭಾಗದಲ್ಲಿ ಬೆಳೆ ನಷ್ಟ ಸಂಭವಿಸಿದಲ್ಲಿ ವಿಮೆ ಮಾಡಿಸಿದ ರೈತರಿಗೆ ಅಂದಾಜು ಮಾಡಲಾದ ಬೆಳೆ ವಿಮಾ ನಷ್ಟ ಪರಿಹಾರದಲ್ಲಿ ಶೇಕಡಾ 25ರಷ್ಟು ಹಣವನ್ನು ಮುಂಚಿತವಾಗಿ ವಿಮಾ ಸಂಸ್ಥೆಯು ನೀಡತಕ್ಕದ್ದು. ಬೆಳೆ ಕಟಾವು ಪ್ರಯೋಗಗಳ ಆಧಾರದ ಮೇಲೆ ಬೆಳೆ ಇಳುವರಿ ಮಾಹಿತಿ ಬಂದನಂತರ ಅಂತಿಮ ಬೆಳೆ ವಿಮಾ ನಷ್ಟ ಪರಿಹಾರದಲ್ಲಿ ಈ ಹಣವನ್ನು ಹೊಂದಾಣಿಕೆ ಮಾಡತಕ್ಕದ್ದು.

17. ಮಾರ್ಪಡಿಸಿದ ರಾಷ್ಟ್ರೀಯ ಕೃಷಿ ವಿಮಾ ಯೋಜನೆಯಡಿ 2013–14ರ ಹಿಂಗಾರು ಮತ್ತು ಬೇಸಿಗೆ ಹಂಗಾಮುಗಳಲ್ಲಿ ಅನುಬಂಧ–1 ಮತ್ತು ಅನುಬಂಧ–2ರಲ್ಲಿ ತೋರಿಸಿದ ಜಿಲ್ಲೆಗಳಲ್ಲಿನ ಘಟಕಗಳಲ್ಲಿ ಹಾಗೂ ಬೆಳೆಗಳಿಗೆ ಸ್ಥಳ ನಿರ್ದಿಷ್ಟ ಪ್ರಕೃತಿ ವಿಕೋಪಗಳ ಸಂದರ್ಭದಲ್ಲಿ ನಷ್ಟದ ನಿರ್ಧರಣೆಗಾಗಿ ಅಳವಡಿಸಿ ಅನುಷ್ಠಾನಗೊಳಿಸಲು ಈ ಮೂಲಕ ಮಂಜೂರಾತಿ ನೀಡಲಾಗಿದೆ. ಅನುಬಂಧ–1 ಮತ್ತು ಅನುಬಂಧ– 2ರಲ್ಲಿ ಹಿಂಗಾರು ಮತ್ತು ಬೇಸಿಗೆ ಹಂಗಾಮುಗಳಲ್ಲಿ ಅಧಿಸೂಚಿಸಲಾದ ಬೆಳೆಗಳಿಗೆ ಆಲಿಕಲ್ಲು ಮಳೆ ಮತ್ತು ಭೂ ಕುಸಿತದಿಂದ ಉಂಟಾಗುವ ನಷ್ಟದ ನಿರ್ಧರಣೆಯನ್ನು ವೈಯಕ್ತಿಕವಾಗಿ ನಿರ್ಧರಿಸಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸುವು ದು. ಇಂತಹ ಸ್ಥಳೀಯ ಗಂಡಾಂತರಗಳ ಕಾರಣದಿಂದ ಬೆಳೆ ನಷ್ಟ ಸಂಭವಿಸಿದರೆ, ವಿಮೆ ಮಾಡಿಸಿರುವ ರೈತರು ಈ ಬಗ್ಗೆ ಸಂಬಂಧಪಟ್ಟ ಹಣಕಾಸು ಸಂಸ್ಥೆ ಅಥವಾ ವಿಮಾ ಸಂಸ್ಥೆಯ ಕಛೇರಿಗೆ ತಕ್ಷಣ ಸೂಚನೆ ನೀಡಬೇಕು ಮತ್ತು ಯಾವು ದೇ ಸಂದರ್ಭದಲ್ಲಿ ವಿಮೆ ಮಾಡಿಸಿದ ಬೆಳೆಯ ವಿವರಗಳನ್ನು, ಹಾನಿಯ ವ್ಯಾಪ್ತಿ ಹಾಗೂ ಹಾನಿಗೆ ಕಾರಣಗಳನ್ನು 48 ಗಂಟೆಗಳೊಳಗಾಗಿ ತಿಳಿಸಬೇಕು. ನಷ್ಟದ ಬಗೆಗಿನ ಮಾಹಿತಿಯನ್ನು ಸ್ವೀಕರಿಸಿದ ಮೇಲೆ ವಿಮಾ ಸಂಸ್ಥೆಯವರು ಬೆಳೆ ನಷ್ಟವನ್ನು ನಿರ್ಧರಿಸುವು ದಕ್ಕೆ ನಷ್ಟ ನಿರ್ಧಾರಕರನ್ನು ಸಂಬಂಧಪಟ್ಟ ಪ್ರದೇಶಕ್ಕೆ ನಿಯೋಜಿಸಬೇಕು. ಜಿಲ್ಲಾ ಕಂದಾಯ ಇಲಾಖೆ ಹಾಗು ಕೃಷಿ ಇಲಾಖೆಯ ಆಡಳಿತವು ಬೆಳೆ ನಷ್ಟದ ಪ್ರಮಾಣವನ್ನು ನಿರ್ಧರಿಸುವಲ್ಲಿ ವಿಮಾ ಸಂಸ್ಥೆಯವರಿಗೆ ನೆರವು ನೀಡತಕ್ಕದ್ದು. ವಿಮೆ ಮಾಡಿಸಿದ ರೈತರಿಂದ ಅರ್ಜಿ ಬಂದ ನಂತರ 2 ತಿಂಗಳೊಳಗೆ ವಿಮಾ ಸಂಸ್ಥೆಯು ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸತಕ್ಕದ್ದು.

18. ಬೆಳೆ ಬಿತ್ತನೆಯಾದ ನಂತರ ಕಟಾವಿಗೆ ಮುನ್ನ ಅಧಿಸೂಚಿತ ವಿಮಾ ಘಟಕದಲ್ಲಿ ಬೆಳೆಯು ಪೂರ್ಣವಾಗಿ ನಾಶ ಹೊಂದಿದಲ್ಲಿ ವಿಮಾ ಸಂಸ್ಥೆಯು ಈ ಕೆಳಕಂಡಂತೆ ಬೆಳೆ ವಿಮಾ ನಷ್ಟ ಪರಿಹಾರವನ್ನು ಅಂತ್ಯದಲ್ಲಿ ಇತ್ಯರ್ಥಪಡಿಸತಕ್ಕದ್ದು.

| | | |
|---|---|---|
| ಅ | ಬಿತ್ತನೆಯಾದ ನಂತರ 1 ರಿಂದ 2 ತಿಂಗಳೊಳಗೆ | ವಿಮಾ ಮೊತ್ತಕ್ಕೆ ಶೇಕಡಾ 50.00ರಷ್ಟು ಪರಿಹಾರ |
| ಆ | ಬಿತ್ತನೆಯಾದ ನಂತರ 2 ರಿಂದ 3 ತಿಂಗಳೊಳಗೆ | ವಿಮಾ ಮೊತ್ತಕ್ಕೆ ಶೇಕಡಾ 75.00ರಷ್ಟು ಪರಿಹಾರ |
| ಇ | ಬಿತ್ತನೆಯಾದ ನಂತರ 3 ತಿಂಗಳ ಮೇಲ್ಪಟ್ಟು | ವಿಮಾ ಮೊತ್ತಕ್ಕೆ ಶೇಕಡಾ 100.00ರಷ್ಟು ಪರಿಹಾರ |

ಈ ಬಗ್ಗೆ ವರದಿಯನ್ನು ನೀಡಲು ಜಿಲ್ಲಾ ಜಿಲ್ಲಾಧಿಕಾರಿಯವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗಿದೆ. ವಿಮಾ ಸಂಸ್ಥೆಯು ಬೆಳೆ ವಿಮಾ ನಷ್ಟ ಪರಿಹಾರವನ್ನು 31ನೇ ಅಕ್ಟೋಬರ್ 2014ರೊಳಗೆ ಇತ್ಯರ್ಥಪಡಿಸತಕ್ಕದ್ದು.

19. ಸಾಮಾನ್ಯ ಬೆಳೆ ಅಂದಾಜು ಸಮೀಕ್ಷೆಯಡಿ ರಾಜ್ಯ ಸರ್ಕಾರವು ನಡೆಸುವ ಬೆಳೆ ಕಟಾವು ಪ್ರಯೋಗಗಳ ಆಧಾರದ ಮೇಲೆ ಕಂಡುಹಿಡಿಯಲಾದ ಇಳುವರಿ ಮಾಹಿತಿಯನ್ನು ಮಾತ್ರ ಪರಿಗಣಿಸಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಲೆಕ್ಕಹಾಕಿ ಇತ್ಯರ್ಥಪಡಿಸಕತಕ್ಕದ್ದು. ಇತರೆ ಇಳುವರಿ ಅಂದಾಜು ಮಾಡುವಂತಹ ವಿಧಾನಗಳಾದ ಆಣೆವಾರಿ ಅಥವಾ ರಾಜ್ಯ ಸರ್ಕಾರವು ಅಥವಾ ಯಾವು ದೇ ಇಲಾಖೆ ಅಥವಾ ಸಂಸ್ಥೆ, ಕ್ಷಾಮ, ಬರ, ಪ್ರವಾಹ ಎಂದು ಘೋಷಿಸಿ ಇಳುವರಿ ನಷ್ಟವನ್ನು ಅಂದಾಜು ಮಾಡುವ ಮಾಹಿತಿಯನ್ನು ಈ ಯೋಜನೆಯಡಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಲೆಕ್ಕಹಾಕಲು ಪರಿಗಣಿಸತಕ್ಕದ್ದಲ್ಲ.

20. ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ, ಇವರು ಅಧಿಸೂಚಿತ ಬೆಳೆಗಳಿಗೆ ಸಾಮಾನ್ಯ ಬೆಳೆ ಅಂದಾಜು ಸಮೀಕ್ಷೆಯಡಿ ಘಟಕವಾರು ಬೆಳೆ ಕಟಾವು ಪ್ರಯೋಗಗಳನ್ನು ನಡೆಸಲು ಯೋಜಿಸುವುದು ಹಾಗೂ ಮೂಲ ಕಾರ್ಯಕರ್ತರುಗಳಿಗೆ ತರಬೇತಿಯ ಸೂಕ್ತ ವ್ಯವಸ್ಥೆ ಮಾಡತಕ್ಕದ್ದು, ಹಾಗೂ ಯಾವುದಾದರೂ ಘಟಕದಲ್ಲಿ ಒಂದಕ್ಕಿಂತ ಹೆಚ್ಚಿನ ಕೃಷಿ ಹವಾಮಾನ ವಲಯಗಳು ಕಂಡುಬಂದಲ್ಲಿ, ಆ ಘಟಕದಲ್ಲಿ ಕೃಷಿ ಹವಾಮಾನ ವಲಯಗಳು ಹೊಂದಿರತಕ್ಕ ಕ್ಷೇತ್ರಕ್ಕೆ ಅನುಗುಣವಾಗಿ ಬೆಳೆ ಕಟಾವು ಪ್ರಯೋಗಗಳನ್ನು ನಿಗದಿಪಡಿಸತಕ್ಕದ್ದು. ಬೆಳೆ ಕಟಾವು ಪ್ರಯೋಗಗಳ ನಂತರ 2013–14ರ ಹಿಂಗಾರು ಹಂಗಾಮಿನ ಬೆಳೆ ಇಳುವರಿ ಮಾಹಿತಿಯನ್ನು ದಿನಾಂಕ:31–07–2014ರೊಳಗೆ ಮತ್ತು ಬೇಸಿಗೆ ಹಂಗಾಮಿಗೆ ದಿನಾಂಕ:31–08–2014ರೊಳಗೆ ವಿಮಾ ಸಂಸ್ಥೆಗೆ ನೀಡತಕ್ಕದ್ದು.

21. ಉತ್ತರಕನ್ನಡ ಜಿಲ್ಲೆಯಲ್ಲಿ ಕಟಾವಿನ ನಂತರ ಬೆಳೆಯನ್ನು ಜಮೀನಿನಲ್ಲೆ ಒಣಗಲು ಬಿಟ್ಟಂತಹ ಸಂದರ್ಭದಲ್ಲಿ ಎರಡು ವಾರಗಳೊಳಗೆ (ಹದಿನಾಲ್ಕು ದಿನಗಳು) ಚಂಡಮಾರುತ ಬಂದು ಬೆಳೆ ನಾಶವಾದರೆ ವೈಯಕ್ತಿಕವಾಗಿ ವಿಮಾ ಸಂಸ್ಥೆಯು ನಷ್ಟ ನಿರ್ಧಾರ ಮಾಡಿ ಬೆಳೆ ನಷ್ಟ ಪರಿಹಾರವನ್ನು ವೈಯಕ್ತಿಕವಾಗಿ ಇತ್ಯರ್ಥಪಡಿಸತಕ್ಕದ್ದು.

22. ವಿಮಾ ಸಂಸ್ಥೆಯು ಅಂತಿಮವಾಗಿ ಬೆಳೆ ವಿಮಾ ನಷ್ಟ ಪರಿಹಾರವನ್ನು ವಿಮೆ ಮಾಡಿಸಿದ ರೈತರಿಗೆ ದಿನಾಂಕ:31–10–2014ರೊಳಗೆ ಇತ್ಯರ್ಥಪಡಿಸತಕ್ಕದ್ದು.

23. ಕೃಷಿ ಮತ್ತು ಕಂದಾಯ ಹಾಗೂ ಸಂಬಂಧಪಟ್ಟ ಇಲಾಖೆಗಳು ಯೋಜನೆಯನ್ನು ಅನುಷ್ಠಾನಗೊಳಿಸಲು ವಿಮಾ ಸಂಸ್ಥೆಯು ಕೈಗೊಳ್ಳುವ ಪ್ರಚಾರ, ಪ್ರಕಟಣೆ ಮತ್ತು ತರಬೇತಿ ನೀಡುವಲ್ಲಿ ಸಹಕಾರ ನೀಡಬೇಕು.

24. ಕೃಷಿ ಇಲಾಖೆ, ಕಂದಾಯ ಇಲಾಖೆ, ಸಹಕಾರ ಇಲಾಖೆ ಹಾಗೂ ಸಂಬಂಧಪಟ್ಟ ಇಲಾಖೆಗಳು 2013–14ರ ಹಿಂಗಾರು ಮತ್ತು ಬೇಸಿಗೆ ಹಂಗಾಮುಗಳಲ್ಲಿ ಅಧಿಸೂಚಿಸಿರುವ ಬೆಳೆಗಳು ಮತ್ತು ಘಟಕಗಳ ಬಗ್ಗೆ ಬ್ಯಾಂಕುಗಳ, ರೈತ ಸಂಪರ್ಕ ಕೇಂದ್ರಗಳ ಮತ್ತು ಗ್ರಾಮ ಪಂಚಾಯತಿ ಕಛೇರಿಗಳ ಸೂಚನಾ ಫಲಕಗಳ ಮೇಲೆ ಪ್ರಕಟಿಸಿ ವ್ಯಾಪಕ ಪ್ರಚಾರ ಕೈಗೊಳ್ಳಲು ಸೂಚಿಸಿದೆ.

25. ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ಅನುಷ್ಠಾನ ಸಂಸ್ಥೆಯಾದ ಅಗ್ರಿಕಲ್ಚರಲ್ ಇನ್ಸೂರೆನ್ಸ್ ಕಂಪನಿ ಆಫ್ ಇಂಡಿಯಾ ಲಿ., ಬೆಂಗಳೂರು, ಇವರು ಬೆಳೆ ವಿಮಾ ಯೋಜನೆಯಲ್ಲಿ ಭಾಗವಹಿಸಲಿರುವ ವಿವಿಧ ಸಂಸ್ಥೆಗಳ ಜೊತೆಯಲ್ಲಿ ಸಮನ್ವಯ ನೀಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ
ಸಹಿ/–
(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ

ಗೆ,
1) ಮಹಾಲೇಖಪಾಲರು, ಬೆಂಗಳೂರು.
2) ರಾಜ್ಯದ ಬೆಳೆ ವಿಮಾ ಸಮಿತಿಯ ಎಲ್ಲಾ ಸದಸ್ಯರಿಗೆ.
3) ಕೃಷಿ ಆಯುಕ್ತರು, ಬೆಂಗಳೂರು.

4) ಕೃಷಿ ನಿರ್ದೇಶಕರು, ಬೆಂಗಳೂರು.
5) ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು.
6) ನಿರ್ದೇಶಕರು (ಪಿಎಫ್‌ಡಿ), ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
7) ಜಿಲ್ಲಾಧಿಕಾರಿಗಳು, ಗುಲಬರ್ಗಾ, ಶಿವಮೊಗ್ಗ, ತುಮಕೂರು ಮತ್ತು ಉತ್ತರಕನ್ನಡ.
8) ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಗುಲಬರ್ಗಾ, ಶಿವಮೊಗ್ಗ, ತುಮಕೂರು ಮತ್ತು ಉತ್ತರಕನ್ನಡ.
9) ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು, ಗುಲಬರ್ಗಾ, ಶಿವಮೊಗ್ಗ, ತುಮಕೂರು ಮತ್ತು ಉತ್ತರಕನ್ನಡ.
10) ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಗುಲಬರ್ಗಾ, ಶಿವಮೊಗ್ಗ, ತುಮಕೂರು ಮತ್ತು ಉತ್ತರಕನ್ನಡ.
11) ಲೀಡ್ ಬ್ಯಾಂಕುಗಳು, ಗುಲಬರ್ಗಾ, ಶಿವಮೊಗ್ಗ, ತುಮಕೂರು ಮತ್ತು ಉತ್ತರಕನ್ನಡ.
12) ಕೇಂದ್ರ ಸಹಕಾರ ಬ್ಯಾಂಕುಗಳು, ಗುಲಬರ್ಗಾ, ಶಿವಮೊಗ್ಗ, ತುಮಕೂರು ಮತ್ತು ಉತ್ತರಕನ್ನಡ.
13) ಸಂಬಂಧಪಟ್ಟ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು.
14) ಸಂಬಂಧಪಟ್ಟ ನೋಡಲ್ ಬ್ಯಾಂಕುಗಳು.
15) ಪ್ರಾದೇಶಿಕ ವ್ಯವಸ್ಥಾಪಕರು, ಅಗ್ರಿಕಲ್ಚರ್ ಇನ್ಸೂರೆನ್ಸ್ ಕಂಪನಿ ಆಫ್ ಇಂಡಿಯಾ ಲಿ., ಕರ್ನಾಟಕ ಪ್ರಾದೇಶಿಕ ಕಛೇರಿ, ಬೆಂಗಳೂರು.
16) ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ –4), ಬೆಂಗಳೂರು.
17) ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ, ಬೆಂಗಳೂರು.
18) ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು.
19) ಕಂಪೈಲರ್, ಕರ್ನಾಟಕ ಗೆಜೆಟ್, ಬೆಂಗಳೂರು, ಇವರು ಇದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕ್ರಮ ತೆಗೆದುಕೊಳ್ಳುವು ದು.
20) ರಕ್ಷಾ ಕಡತ : ಹೆಚ್ಚುವರಿ ಪ್ರತಿ.

(ಕ್ರಮ ಸಂಖ್ಯೆ: 7 ರಿಂದ 10 ರವರೆಗೆ ಕೃಷಿ ನಿರ್ದೇಶಕರ ಮೂಲಕ ಹಾಗೂ
ಕ್ರಮ ಸಂಖ್ಯೆ: 11 ರಿಂದ 14 ರವರೆಗೆ ವಿಮಾ ಸಂಸ್ಥೆಯ ಮೂಲಕ)

**ಅನುಬಂಧ – 1**

**ಸರ್ಕಾರದ ಆದೇಶ ಸಂಖ್ಯೆ:ಕೃಇ/144/ಕೃಉಇ/2013, ಬೆಂಗಳೂರು; ದಿನಾಂಕ:26–10–2013.**

**2013–14ರ ಹಿಂಗಾರು ಹಂಗಾಮಿನಲ್ಲಿ ಪ್ರಾಯೋಗಿಕ ಮಾರ್ಪಡಿಸಿದ ರಾಷ್ಟ್ರೀಯ ಕೃಷಿ ವಿಮಾ ಯೋಜನೆಯಡಿ ಹೋಬಳಿ ಮಟ್ಟಕ್ಕೆ ಒಳಗೊಂಡ ಬೆಳೆಗಳ ಪಟ್ಟಿ**

| ಕ್ರ. ಸಂ. | | ಜಿಲ್ಲೆ/ ತಾಲ್ಲೂಕು/ ಹೋಬಳಿ | ಬೆಳೆಗಳು |
|---|---|---|---|
| **1. ಗುಲಬರ್ಗಾ ಜಿಲ್ಲೆ** | | | |
| **1** | **ಅಫಜಲಪುರ** | | |
| | 1 | ಅಫಜಲಪುರ | ಕುಸುಮೆ (ಮಳೆ ಆಶ್ರಿತ) |
| | 2 | ಅತನೂರ | ಕುಸುಮೆ (ಮಳೆ ಆಶ್ರಿತ) |
| | 3 | ಕರಜಗಿ | ಕುಸುಮೆ (ಮಳೆ ಆಶ್ರಿತ) |
| **2** | **ಆಳಂದ** | | |
| | 4 | ಆಳಂದ | ಕುಸುಮೆ (ಮಳೆ ಆಶ್ರಿತ) |
| | 5 | ಖಜೂರಿ | ಕುಸುಮೆ (ಮಳೆ ಆಶ್ರಿತ) |
| | 6 | ಮದನ ಹಿಪ್ಪರಗ | ಕುಸುಮೆ (ಮಳೆ ಆಶ್ರಿತ) |
| | 7 | ನರೋನ | ಕುಸುಮೆ (ಮಳೆ ಆಶ್ರಿತ) |
| | 8 | ನಿಂಬಾರ್ಗ | ಕುಸುಮೆ (ಮಳೆ ಆಶ್ರಿತ) |
| **3** | **ಚಿಂಚೋಳಿ** | | |
| | 9 | ಐನಾಪುರ | ಕುಸುಮೆ (ಮಳೆ ಆಶ್ರಿತ) |
| | 10 | ಚಿಂಚೋಳಿ | ಕುಸುಮೆ (ಮಳೆ ಆಶ್ರಿತ) |
| | 11 | ಕೋಡ್ಲಿ | ಕುಸುಮೆ (ಮಳೆ ಆಶ್ರಿತ) |
| | 12 | ಸುಲೇಪೇಟ | ಕುಸುಮೆ (ಮಳೆ ಆಶ್ರಿತ) |
| **4** | **ಚಿತ್ತಾಪುರ** | | |
| | 13 | ಚಿತ್ತಾಪುರ | ಕುಸುಮೆ (ಮಳೆ ಆಶ್ರಿತ) |
| | 14 | ಗುಂಡಗುರ್ತಿ | ಕುಸುಮೆ (ಮಳೆ ಆಶ್ರಿತ) |
| | 15 | ಕಾಳಗಿ | ಕುಸುಮೆ (ಮಳೆ ಆಶ್ರಿತ) |
| | 16 | ನಲವಾರ | ಭತ್ತ (ನೀರಾವರಿ), ಕುಸುಮೆ (ಮಳೆ ಆಶ್ರಿತ) |
| | 17 | ಶಹಬಾದ್ | ಕುಸುಮೆ (ಮಳೆ ಆಶ್ರಿತ) |

| | | | |
|---|---|---|---|
| **5** | **ಗುಲಬರ್ಗಾ** | | |
| | 18 | ಔರಾದ್ | ಕುಸುಮೆ (ಮಳೆ ಆಶ್ರಿತ) |
| | 19 | ಫರತಾಬಾದ್ | ಕುಸುಮೆ (ಮಳೆ ಆಶ್ರಿತ) |
| | 20 | ಗುಲಬರ್ಗಾ | ಕುಸುಮೆ (ಮಳೆ ಆಶ್ರಿತ) |
| | 21 | ಕಮಲಪುರ | ಕುಸುಮೆ (ಮಳೆ ಆಶ್ರಿತ) |
| | 22 | ಮಹಗಾಂವ್ | ಕುಸುಮೆ (ಮಳೆ ಆಶ್ರಿತ) |
| | 23 | ಪಟ್ಟಣ್ | ಕುಸುಮೆ (ಮಳೆ ಆಶ್ರಿತ) |
| **6** | **ಜೇವರ್ಗಿ** | | |
| | 24 | ಅಂದೋಲ | ಕುಸುಮೆ (ಮಳೆ ಆಶ್ರಿತ) |
| | 25 | ಇಜೇರಿ | ಭತ್ತ (ನೀರಾವರಿ), ಕುಸುಮೆ (ಮಳೆ ಆಶ್ರಿತ) |
| | 26 | ಜೇವರ್ಗಿ | ಕುಸುಮೆ (ಮಳೆ ಆಶ್ರಿತ) |
| | 27 | ನೆಲೋಗಿ | ಮುಸುಕಿನ ಜೋಳ (ನೀರಾವರಿ), ಕುಸುಮೆ (ಮಳೆ ಆಶ್ರಿತ) |
| | 28 | ಯಡ್ರಾಮಿ | ಮುಸುಕಿನ ಜೋಳ (ನೀರಾವರಿ), ಕುಸುಮೆ (ಮಳೆ ಆಶ್ರಿತ) |
| **7** | **ಸೇಡಂ** | | |
| | 29 | ಅಡಕಿ | ಭತ್ತ (ನೀರಾವರಿ), ಕುಸುಮೆ (ಮಳೆ ಆಶ್ರಿತ) |
| | 30 | ಕೋಡ್ಲ | ಕುಸುಮೆ (ಮಳೆ ಆಶ್ರಿತ) |
| | 31 | ಮುಧೋಳ | ಭತ್ತ (ನೀರಾವರಿ), ಕುಸುಮೆ (ಮಳೆ ಆಶ್ರಿತ) |
| | 32 | ಸೇಡಂ | ಕುಸುಮೆ (ಮಳೆ ಆಶ್ರಿತ) |
| **2. ಶಿವಮೊಗ್ಗ ಜಿಲ್ಲೆ** | | | |
| **8** | **ಶಿಕಾರಿಪುರ** | | |
| | 33 | ಹೊಸೂರು | ಮುಸುಕಿನ ಜೋಳ (ನೀರಾವರಿ) |
| | 34 | ಉಡುಗಣಿ | ಮುಸುಕಿನ ಜೋಳ (ನೀರಾವರಿ) |
| **9** | **ಸೊರಬ** | | |
| | 35 | ಜಡೆ | ಹೆಸರು (ಮಳೆ ಆಶ್ರಿತ) |
| **3. ತುಮಕೂರು ಜಿಲ್ಲೆ** | | | |
| **10** | **ಚಿಕ್ಕನಾಯಕನಹಳ್ಳಿ** | | |
| | 36 | ಚಿಕ್ಕನಾಯಕನಹಳ್ಳಿ | ಹುರುಳಿ (ಮಳೆ ಆಶ್ರಿತ) |
| | 37 | ಹಂದನಕೆರೆ | ಹುರುಳಿ (ಮಳೆ ಆಶ್ರಿತ) |
| | 38 | ಹುಳಿಯಾರು | ಹುರುಳಿ (ಮಳೆ ಆಶ್ರಿತ) |
| | 39 | ಕಂದಿಕೆರೆ | ಹುರುಳಿ (ಮಳೆ ಆಶ್ರಿತ) |

| | | | |
|---|---|---|---|
| **11** | **ಗುಬ್ಬಿ** | | |
| | 40 | ಚಂದ್ರಶೇಖರಪುರ | ಹುರುಳಿ (ಮಳೆ ಆಶ್ರಿತ) |
| | 41 | ಚೇಳೂರು | ಹುರುಳಿ (ಮಳೆ ಆಶ್ರಿತ) |
| | 42 | ಹಾಗಲವಾಡಿ | ಹುರುಳಿ (ಮಳೆ ಆಶ್ರಿತ) |
| | 43 | ಕಡಬ | ಹುರುಳಿ (ಮಳೆ ಆಶ್ರಿತ) |
| | 44 | ನಿಟ್ಟೂರು | ಹುರುಳಿ (ಮಳೆ ಆಶ್ರಿತ) |
| **12** | **ಕುಣಿಗಲ್** | | |
| | 45 | ಅಮೃತೂರು | ಭತ್ತ (ನೀರಾವರಿ) |
| | 46 | ಹುಲಿಯೂರುದುರ್ಗ | ಹುರುಳಿ (ಮಳೆ ಆಶ್ರಿತ) |
| | 47 | ಹುತ್ರಿದುರ್ಗ | ಹುರುಳಿ (ಮಳೆ ಆಶ್ರಿತ) |
| | 48 | ಯಡಿಯೂರು | ಹುರುಳಿ (ಮಳೆ ಆಶ್ರಿತ) |
| **13** | **ಮಧುಗಿರಿ** | | |
| | 49 | ಐ.ಡಿ. ಹಳ್ಳಿ | ಮುಸುಕಿನ ಜೋಳ (ನೀರಾವರಿ) |
| | 50 | ಕೊಡಿಗೇನಹಳ್ಳಿ | ಮುಸುಕಿನ ಜೋಳ (ನೀರಾವರಿ) |
| | 51 | ಮಿಡಿಗೇಶಿ | ಹುರುಳಿ (ಮಳೆ ಆಶ್ರಿತ) |
| | 52 | ಪುರವಾರ | ಮುಸುಕಿನ ಜೋಳ (ನೀರಾವರಿ) |
| **14** | **ಶಿರಾ** | | |
| | 53 | ಬುಕ್ಕಾಪಟ್ಟಣ | ಹುರುಳಿ (ಮಳೆ ಆಶ್ರಿತ) |
| | 54 | ಕಳ್ಳಂಬೆಳ್ಳ | ಹುರುಳಿ (ಮಳೆ ಆಶ್ರಿತ) |
| **15** | **ತುಮಕೂರು** | | |
| | 55 | ಗೂಳೂರು | ಹುರುಳಿ (ಮಳೆ ಆಶ್ರಿತ) |
| | 56 | ತುಮಕೂರು | ಹುರುಳಿ (ಮಳೆ ಆಶ್ರಿತ) |
| **16** | **ತುರುವೇಕೆರೆ** | | |
| | 57 | ದಬ್ಬೇಘಟ್ಟ | ಹುರುಳಿ (ಮಳೆ ಆಶ್ರಿತ) |
| | 58 | ದಂಡಿನಶಿವರ | ಹುರುಳಿ (ಮಳೆ ಆಶ್ರಿತ) |
| | 59 | ಮಾಯಸಂದ್ರ | ಹುರುಳಿ (ಮಳೆ ಆಶ್ರಿತ) |
| | 60 | ತುರುವೇಕೆರೆ | ಹುರುಳಿ (ಮಳೆ ಆಶ್ರಿತ) |
| **4. ಉತ್ತರ ಕನ್ನಡ ಜಿಲ್ಲೆ** | | | |
| **17** | **ಅಂಕೋಲ** | | |
| | 61 | ಬಳಲೆ | ನೆಲಗಡಲೆ(ಶೇಂಗಾ) (ಮಳೆ ಆಶ್ರಿತ) |
| | 62 | ಬೇಲಿಕೇರಿ | ನೆಲಗಡಲೆ(ಶೇಂಗಾ) (ಮಳೆ ಆಶ್ರಿತ) |

| | | |
|---|---|---|
| **18** | **ಭಟ್ಕಳ** | |
| 63 | ಮಾವಳ್ಳಿ | ನೆಲಗಡಲೆ(ಶೇಂಗಾ) (ಮಳೆ ಆಶ್ರಿತ) |
| 64 | ಸೂಸಗಡಿ | ಭತ್ತ (ನೀರಾವರಿ) |
| **19** | **ಹಳಿಯಾಳ** | |
| 65 | ಮುರಕವಾಡ | ಹೆಸರು (ಮಳೆಆಶ್ರಿತ) |
| **20** | **ಹೊನ್ನಾವರ** | |
| 66 | ಹೊನ್ನಾವರ | ಭತ್ತ (ನೀರಾವರಿ) |
| 67 | ಮಂಕಿ | ಭತ್ತ (ನೀರಾವರಿ), ನೆಲಗಡಲೆ(ಶೇಂಗಾ) (ಮಳೆ ಆಶ್ರಿತ) |
| **21** | **ಕುಮಟಾ** | |
| 68 | ಕೂಜಳ್ಳಿ | ಭತ್ತ (ನೀರಾವರಿ) |

## 2012-13ರ ಬೇಸಿಗೆ ಹಂಗಾಮಿನಲ್ಲಿ ಪ್ರಾಯೋಗಿಕ ಮಾರ್ಪಡಿಸಿದ ರಾಷ್ಟ್ರೀಯ ಕೃಷಿ ವಿಮಾ ಯೋಜನೆಯಡಿ ಹೋಬಳಿ ಮಟ್ಟಕ್ಕೆ ಒಳಗೊಂಡ ಬೆಳೆಗಳ ಪಟ್ಟಿ

| ಕ್ರ. ಸಂ. | ಜಿಲ್ಲೆ/ ತಾಲ್ಲೂಕು/ ಹೋಬಳಿ | ಬೆಳೆಗಳು |
|---|---|---|
| **1. ಗುಲಬರ್ಗಾ ಜಿಲ್ಲೆ** | | |
| **1** | **ಜೇವರ್ಗಿ** | |
| 1 | ಯಡ್ರಾಮಿ | ಸೂರ್ಯಕಾಂತಿ (ನೀರಾವರಿ) |
| **2. ಶಿವಮೊಗ್ಗ ಜಿಲ್ಲೆ** | | |
| **2** | **ಶಿಕಾರಿಪುರ** | |
| 2 | ಹೊಸೂರು | ಸೂರ್ಯಕಾಂತಿ (ನೀರಾವರಿ) |
| 3 | ಉಡಗಣಿ | ಸೂರ್ಯಕಾಂತಿ (ನೀರಾವರಿ) |
| 4 | ಶಿಕಾರಿಪುರ | ಸೂರ್ಯಕಾಂತಿ (ನೀರಾವರಿ) |
| **3** | **ಶಿವಮೊಗ್ಗ** | |
| 5 | ಹಾರನಹಳ್ಳಿ | ಸೂರ್ಯಕಾಂತಿ (ನೀರಾವರಿ) |

| | | | |
|---|---|---|---|
| **3. ತುಮಕೂರು ಜಿಲ್ಲೆ** | | | |
| **4** | **ಪಾವಗಡ** | | |
| | 6 | ನಾಗಲಮಡಿಕೆ | ಸೂರ್ಯಕಾಂತಿ (ನೀರಾವರಿ) |
| | 7 | ನಿಡಗಲ್ | ಸೂರ್ಯಕಾಂತಿ (ನೀರಾವರಿ) |
| | 8 | ವೈ.ಎನ್. ಹೊಸಕೋಟೆ | ಸೂರ್ಯಕಾಂತಿ (ನೀರಾವರಿ) |
| **5** | **ಶಿರಾ** | | |
| | 9 | ಗೌಡಗೆರೆ | ಸೂರ್ಯಕಾಂತಿ (ನೀರಾವರಿ) |

ಸಹಿ/–
(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ

**ಅನುಬಂಧ – 2**

**ಸರ್ಕಾರದ ಆದೇಶ ಸಂಖ್ಯೆ:ಕೃಇ/144/ಕೃಉಇ/2013, ಬೆಂಗಳೂರು; ದಿನಾಂಕ:26–10–2013.**

**2013–14ರ ಹಿಂಗಾರು ಹಂಗಾಮಿನಲ್ಲಿ ಪ್ರಾಯೋಗಿಕ ಮಾರ್ಪಡಿಸಿದ ರಾಷ್ಟ್ರೀಯ ಕೃಷಿ ವಿಮಾ ಯೋಜನೆಯಡಿ ಗ್ರಾಮ ಪಂಚಾಯತಿ ಮಟ್ಟಕ್ಕೆ ಒಳಗೊಂಡ ಬೆಳೆಗಳ ಪಟ್ಟಿ**

| ಕ್ರ. ಸಂ. | | ಜಿಲ್ಲೆ/ ತಾಲ್ಲೂಕು/ ಗ್ರಾಮಪಂಚಾಯತಿ | ಬೆಳೆಗಳು |
|---|---|---|---|
| **1. ಗುಲಬರ್ಗಾ ಜಿಲ್ಲೆ** | | | |
| **1** | **ಅಫಜಲಪುರ** | | |
| | 1 | ಅಫಜಲಪುರ ಪಟ್ಟಣ ಪಂಚಾಯತಿ | ಜೋಳ (ನೀರಾವರಿ), ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಗೋಧಿ (ಮಳೆ ಆಶ್ರಿತ), ಕಡಲೆ (ನೀರಾವರಿ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 2 | ಮಣ್ಣೂರ | ಜೋಳ (ನೀರಾವರಿ), ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಗೋಧಿ (ಮಳೆ ಆಶ್ರಿತ), ಕಡಲೆ (ನೀರಾವರಿ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 3 | ಮುಶಾಳ | ಜೋಳ (ನೀರಾವರಿ), ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಗೋಧಿ (ಮಳೆ ಆಶ್ರಿತ), ಕಡಲೆ (ನೀರಾವರಿ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 4 | ಕರಜಗಿ | ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಕಡಲೆ (ನೀರಾವರಿ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 5 | ಉಡಚಣ | ಜೋಳ (ನೀರಾವರಿ), ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಕಡಲೆ (ನೀರಾವರಿ), ಕಡಲೆ (ಮಳೆ ಆಶ್ರಿತ) |
| | 6 | ಅಳಗಿ (ಬಿ) | ಜೋಳ (ನೀರಾವರಿ), ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಗೋಧಿ (ಮಳೆ ಆಶ್ರಿತ), ಕಡಲೆ (ನೀರಾವರಿ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 7 | ಬಳೂರಗಿ | ಜೋಳ (ನೀರಾವರಿ), ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಗೋಧಿ (ಮಳೆ ಆಶ್ರಿತ), ಕಡಲೆ (ನೀರಾವರಿ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 8 | ಗೌರ (ಬಿ) | ಜೋಳ (ನೀರಾವರಿ), ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಗೋಧಿ (ಮಳೆ ಆಶ್ರಿತ), ಕಡಲೆ (ನೀರಾವರಿ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 9 | ಬಡದಾಳ | ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಕಡಲೆ (ನೀರಾವರಿ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 10 | ರೇವೂರ (ಬಿ) | ಜೋಳ (ನೀರಾವರಿ), ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಕಡಲೆ (ನೀರಾವರಿ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |

| | | | |
|---|---|---|---|
| | 11 | ಮಲ್ಲಾಬಾದ | ಜೋಳ (ಮಳೆ ಆಶ್ರಿತ), ಗೋಧಿ(ನೀರಾವರಿ), ಕಡಲೆ (ನೀರಾವರಿ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 12 | ಆತನೂರ | ಜೋಳ (ನೀರಾವರಿ), ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಗೋಧಿ (ಮಳೆ ಆಶ್ರಿತ), ಕಡಲೆ (ನೀರಾವರಿ), ಕಡಲೆ(ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 13 | ಚೌಡಾಪುರ | ಜೋಳ (ನೀರಾವರಿ), ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಗೋಧಿ (ಮಳೆ ಆಶ್ರಿತ), ಕಡಲೆ (ಮಳೆ ಆಶ್ರಿತ) |
| | 14 | ದೇವಳಗಾಣಗಾಪುರ | ಜೋಳ (ನೀರಾವರಿ), ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಕಡಲೆ (ನೀರಾವರಿ), ಕಡಲೆ (ಮಳೆ ಆಶ್ರಿತ) |
| | 15 | ಬಂದರವಾಡ | ಜೋಳ (ನೀರಾವರಿ), ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಕಡಲೆ (ಮಳೆ ಆಶ್ರಿತ) |
| | 16 | ಹಸರ ಗುಂಡಗಿ | ಜೋಳ (ನೀರಾವರಿ), ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಕಡಲೆ (ಮಳೆ ಆಶ್ರಿತ) |
| | 17 | ಗಬ್ಬೂರ (ಬಿ) | ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಕಡಲೆ (ನೀರಾವರಿ), ಕಡಲೆ(ಮಳೆ ಆಶ್ರಿತ), ಸೂರ್ಯಕಾಂತಿ(ಮಳೆ ಆಶ್ರಿತ) |
| | 18 | ಬಿದನೂರ | ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಕಡಲೆ (ಮಳೆ ಆಶ್ರಿತ) |
| | 19 | ಬೈರಾಮಡಗಿ | ಜೋಳ (ನೀರಾವರಿ), ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಗೋಧಿ (ಮಳೆ ಆಶ್ರಿತ), ಕಡಲೆ (ನೀರಾವರಿ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 20 | ಕೋಗನೂರ | ಜೋಳ (ನೀರಾವರಿ), ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಕಡಲೆ (ನೀರಾವರಿ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 21 | ಕಲ್ಲೂರ | ಜೋಳ (ನೀರಾವರಿ), ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಗೋಧಿ (ಮಳೆ ಆಶ್ರಿತ), ಕಡಲೆ (ನೀರಾವರಿ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 22 | ಗುಡೂರ | ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಕಡಲೆ (ನೀರಾವರಿ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 23 | ಆನೂರ | ಜೋಳ (ನೀರಾವರಿ), ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಗೋಧಿ (ಮಳೆ ಆಶ್ರಿತ), ಕಡಲೆ (ನೀರಾವರಿ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| **2** | **ಆಳಂದ** | | |
| | 24 | ಅಳಂಗಾ | ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 25 | ಖಜೂರಿ | ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 26 | ಹೊದಲೂರು | ಜೋಳ (ಮಳೆ ಆಶ್ರಿತ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 27 | ರುದ್ರವಾಡಿ | ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಗೋಧಿ (ಮಳೆ ಆಶ್ರಿತ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 28 | ಬೆಳಮಗಿ | ಜೋಳ(ನೀರಾವರಿ), ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಕಡಲೆ (ನೀರಾವರಿ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ(ನೀರಾವರಿ), ಸೂರ್ಯಕಾಂತಿ (ಮಳೆ ಆಶ್ರಿತ), |

| | | | |
|---|---|---|---|
| | 29 | ವಿ.ಕೆ. ಸಲಗರ | ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 30 | ಅಂಬಲಗಾ | ಜೋಳ (ಮಳೆ ಆಶ್ರಿತ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 31 | ಶ್ರೀಚಂದಾ | ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 32 | ಬೋಧನಾ | ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 33 | ಲಾಡಮಗಳಿ | ಜೋಳ (ಮಳೆ ಆಶ್ರಿತ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 34 | ಚಿಂಚನಸೂರ | ಜೋಳ (ಮಳೆ ಆಶ್ರಿತ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 35 | ಗೋಳಾ (ಬಿ) | ಜೋಳ (ಮಳೆ ಆಶ್ರಿತ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 36 | ನರೋಣ | ಜೋಳ (ನೀರಾವರಿ), ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 37 | ಹಳ್ಳಿಸಲಗಾರ | ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 38 | ಕೂಡಲಹಂಗರಗಾ | ಜೋಳ (ಮಳೆ ಆಶ್ರಿತ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 39 | ತಡಕಲ್ | ಜೋಳ (ನೀರಾವರಿ), ಜೋಳ (ಮಳೆ ಆಶ್ರಿತ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 40 | ಮುನ್ನಳ್ಳಿ | ಜೋಳ (ಮಳೆ ಆಶ್ರಿತ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 41 | ಕಿಣ್ಣಿಸುಲ್ತಾನ | ಜೋಳ (ಮಳೆ ಆಶ್ರಿತ), ಗೋಧಿ (ಮಳೆ ಆಶ್ರಿತ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 42 | ನೀರಗುಡಿ | ಜೋಳ(ನೀರಾವರಿ), ಜೋಳ (ಮಳೆ ಆಶ್ರಿತ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 43 | ಪಡಸಾವಳಗಿ | ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಗೋಧಿ (ಮಳೆ ಆಶ್ರಿತ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ನೀರಾವರಿ), ಸೂರ್ಯಕಾಂತಿ (ಮಳೆ ಆಶ್ರಿತ) |
| | 44 | ಸರಸಂಬಾ | ಜೋಳ (ಮಳೆ ಆಶ್ರಿತ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 45 | ಹಿರೋಳಿ | ಜೋಳ (ಮಳೆ ಆಶ್ರಿತ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 46 | ಸಾವಳೇಶ್ವರ | ಜೋಳ (ಮಳೆ ಆಶ್ರಿತ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 47 | ದ. ಶಿರೂರ | ಜೋಳ (ಮಳೆ ಆಶ್ರಿತ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |

| | | | |
|---|---|---|---|
| | 48 | ಮಾ. ಹಿಪ್ಪರಗಾ | ಜೋಳ (ನೀರಾವರಿ), ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಕಡಲೆ (ನೀರಾವರಿ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 49 | ನಿಂಬಾಳ | ಜೋಳ (ಮಳೆ ಆಶ್ರಿತ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 50 | ಹಡಲಗಿ | ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 51 | ಯಳಸಂಗಿ | ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 52 | ಮಾಢ್ಯಾಳ | ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 53 | ಕವಲಗಾ | ಜೋಳ (ಮಳೆ ಆಶ್ರಿತ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 54 | ಜಿಡಗಾ | ಜೋಳ (ನೀರಾವರಿ), ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಗೋಧಿ (ಮಳೆ ಆಶ್ರಿತ), ಕಡಲೆ(ನೀರಾವರಿ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 55 | ಬೂಸನೂರ | ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 56 | ಕೋರಳ್ಳಿ | ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 57 | ದಂಗಾಪೂರ | ಜೋಳ (ಮಳೆ ಆಶ್ರಿತ), ಗೋಧಿ (ಮಳೆ ಆಶ್ರಿತ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 58 | ದುತ್ತರಗಾಂವ | ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 59 | ನಿಂಬರಗಾ | ಜೋಳ (ಮಳೆ ಆಶ್ರಿತ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 60 | ಸುಂಟನೂರ | ಜೋಳ (ಮಳೆ ಆಶ್ರಿತ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 61 | ಕಡಗಂಚಿ | ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ಮಳೆ ಆಶ್ರಿತ) |
| | 62 | ಕಮಲಾನಗರ | ಜೋಳ (ಮಳೆ ಆಶ್ರಿತ), ಗೋಧಿ (ನೀರಾವರಿ), ಕಡಲೆ (ಮಳೆ ಆಶ್ರಿತ), ಸೂರ್ಯಕಾಂತಿ (ನೀರಾವರಿ), ಸೂರ್ಯಕಾಂತಿ (ಮಳೆ ಆಶ್ರಿತ) |
| | 63 | ಆಳಂದ | ಜೋಳ (ಮಳೆ ಆಶ್ರಿತ), ಗೋಧಿ(ನೀರಾವರಿ), ಕಡಲೆ(ಮಳೆ ಆಶ್ರಿತ), ಸೂರ್ಯಕಾಂತಿ (ನೀರಾವರಿ), ಸೂರ್ಯಕಾಂತಿ (ಮಳೆ ಆಶ್ರಿತ) |
| **3** | **ಚಿಂಚೋಳಿ** | | |
| | 64 | ಮಿರಿಯಾಣ | ಜೋಳ(ಮಳೆ ಆಶ್ರಿತ), ಗೋಧಿ(ಮಳೆ ಆಶ್ರಿತ), ಕಡಲೆ ಮಳೆ ಆಶ್ರಿತ) |
| | 65 | ಪೋಲಕಪಳ್ಳಿ | ಜೋಳ (ಮಳೆ ಆಶ್ರಿತ), ಗೋಧಿ(ಮಳೆ ಆಶ್ರಿತ), ಕಡಲೆ (ಮಳೆ ಆಶ್ರಿತ) |
| | 66 | ದೇಗಲಮಡಿ | ಜೋಳ (ಮಳೆ ಆಶ್ರಿತ), ಗೋಧಿ(ಮಳೆ ಆಶ್ರಿತ),ಕಡಲೆ (ಮಳೆ ಆಶ್ರಿತ) |

| | | | |
|---|---|---|---|
| | 67 | ನಾಗಾಯದ್ಲಾಯ | ಜೋಳ (ಮಳೆ ಆಶ್ರಿತ), ಕಡಲೆ (ಮಳೆ ಆಶ್ರಿತ) |
| | 68 | ಚಿಂಚೋಳಿ ಪಟ್ಟಣ ಪಂಚಾಯತಿ | ಜೋಳ (ಮಳೆ ಆಶ್ರಿತ), ಗೋಧಿ (ಮಳೆ ಆಶ್ರಿತ), ಕಡಲೆ (ಮಳೆ ಆಶ್ರಿತ) |
| | 69 | ಅಣವಾರ | ಜೋಳ (ಮಳೆ ಆಶ್ರಿತ), ಗೋಧಿ (ಮಳೆ ಆಶ್ರಿತ), ಕಡಲೆ (ಮಳೆ ಆಶ್ರಿತ) |
| | 70 | ಸಾಲೇಬೀರನಹಳ್ಳಿ | ಜೋಳ (ಮಳೆ ಆಶ್ರಿತ), ಗೋಧಿ (ಮಳೆ ಆಶ್ರಿತ), ಕಡಲೆ (ಮಳೆ ಆಶ್ರಿತ) |
| | 71 | ಹಸರ ಗುಂಡಗಿ | ಜೋಳ(ಮಳೆ ಆಶ್ರಿತ), ಗೋಧಿ(ಮಳೆ ಆಶ್ರಿತ), ಕಡಲೆ(ಮಳೆ ಆಶ್ರಿತ) |
| | 72 | ಚಿಮ್ಮನ್ನಚೂಡ | ಜೋಳ (ಮಳೆ ಆಶ್ರಿತ), ಗೋಧಿ(ಮಳೆ ಆಶ್ರಿತ), ಕಡಲೆ (ಮಳೆ ಆಶ್ರಿತ) |
| | 73 | ಬಸಂತಪುರ | ಜೋಳ (ಮಳೆ ಆಶ್ರಿತ), ಕಡಲೆ (ಮಳೆ ಆಶ್ರಿತ) |
| | 74 | ಐನಾಪುರ | ಜೋಳ (ಮಳೆ ಆಶ್ರಿತ), ಗೋಧಿ (ಮಳೆ ಆಶ್ರಿತ), ಕಡಲೆ (ಮಳೆ ಆಶ್ರಿತ) |
| | 75 | ಗಡಿಲಿಂಗದಳ್ಳಿ | ಜೋಳ (ಮಳೆ ಆಶ್ರಿತ), ಕಡಲೆ (ಮಳೆ ಆಶ್ರಿತ) |
| | 76 | ಚಂದನಕೇರಾ | ಜೋಳ(ಮಳೆ ಆಶ್ರಿತ), ಗೋಧಿ(ಮಳೆ ಆಶ್ರಿತ), ಕಡಲೆ(ಮಳೆ ಆಶ್ರಿತ) |
| | 77 | ಚೇಂಗಟಾ | ಜೋಳ(ಮಳೆ ಆಶ್ರಿತ), ಗೋಧಿ(ಮಳೆ ಆಶ್ರಿತ), ಕಡಲೆ(ಮಳೆ ಆಶ್ರಿತ) |
| | 78 | ಕರಕಮುಕಳಿ | ಜೋಳ (ಮಳೆ ಆಶ್ರಿತ), ಕಡಲೆ (ಮಳೆ ಆಶ್ರಿತ) |
| | 79 | ಚಿಮ್ಮ ಇದ್ಲಾಯಿ | ಜೋಳ (ಮಳೆ ಆಶ್ರಿತ), ಕಡಲೆ (ಮಳೆ ಆಶ್ರಿತ) |
